# ಮಾಲಿನ್ಯದಿಂದ ಹೃದ್ರೋಗ



ಹವಾಮಾನದಲ್ಲಿ ಉಂಟಾಗುವ ಶಬ್ದ ಹಾಗೂ ವಾಯು ಮಾಲಿನ್ಯದಿಂದ ಹೃದಯಕ್ಕೆ ತೊಂದರೆ ಉಂಟಾಗುತ್ತದೆ ಎಂದು ಜರ್ಮನಿಯ ಹೃದಯ ತಜ್ಞರು ನಡೆಸಿದ ಅಧ್ಯಯನದಿಂದ ತಿಳಿದು ಬಂದಿದೆ.

ರಾಸಾಯನಿಕಗಳು ಹಾಗೂ ಇಂಧನಗಳ ಬಳಕೆಯಿಂದ ಅಪಾರ ಪ್ರಮಾಣದಲ್ಲಿ ಗಾಳಿ ಕಲುಷಿತಗೊಳ್ಳುತ್ತದೆ. ಇದರ ಜೊತೆಗೆ ನಗರೀಕರಣದ ಪರಿಣಾಮ ಶಬ್ದ ಮಾಲಿನ್ಯದಲ್ಲಿಯೂ ಏರಿಕೆಯಾಗಿದೆ. ಇದು ಹೃದಯಕ್ಕೆ ತೊಂದರೆಯನ್ನು ಉಂಟು ಮಾಡುತ್ತದೆ ಎಂದು ಸಂಶೋಧಕರು ಅಭಿಪ್ರಾಯಪಟ್ಟಿದ್ದಾರೆ.

ಮಾಲಿನ್ಯಗೊಂಡ ಪರಿಸರದಿಂದ 4814 ಮಂದಿಯನ್ನು ಆಯ್ದುಕೊಂಡು ಸಂಶೋಧಕರು ಅಧ್ಯಯನ ನಡೆಸಿದ್ದರು. ಅದರಲ್ಲಿ ಬಹುತೇಕರಿಗೆ ಹೃದಯ ಸಮಸ್ಯೆ ಇರುವುದನ್ನು ಸಂಶೋಧಕರು ಗುರುತಿಸಿದ್ದಾರೆ.

# ‘ಭ್ರಾಂತಿ’ ಪತ್ತೆಗೆ ಹೊಸ ತಂತ್ರ

ಮಕ್ಕಳಲ್ಲಿ ಉಂಟಾಗುವ ಭ್ರಾಂತಿಯನ್ನು (autism) ಪತ್ತೆಹಚ್ಚಲು ಹೊಸ ತಂತ್ರವನ್ನು ಕಂಡುಹಿಡಿಯಲಾಗಿದೆ ಎಂದು ವಿಜ್ಞಾನಿಗಳು ಹೇಳಿದ್ದಾರೆ.

ಚಿಕ್ಕ ಮಕ್ಕಳು ತಮ್ಮ ಮನಸ್ಸಿನಲ್ಲಿ ಉಂಟಾಗುವ ವೇದನೆಯನ್ನು ಸಮರ್ಪಕವಾಗಿ ಪ್ರಕಟಿಸುವುದಿಲ್ಲ. ‘ಭ್ರಮೆ’ಯಲ್ಲಿ ತೇಲುತ್ತಾ ಯಾವುದೋ ಒಂದೇ ಕಡೆ ಗಮನವನ್ನು ಕೇಂದ್ರೀಕರಿಸುತ್ತಾರೆ. ಅವರ ನಡವಳಿಕೆಯನ್ನು ಬೇಗನೆ ಪತ್ತೆಹಚ್ಚುವುದು ಕಷ್ಟ. ಅವರ ಮೆದುಳಿನ ಕ್ರಿಯೆಯನ್ನು ಗುರುತಿಸುವ ಮೂಲಕ ಸುಲಭವಾಗಿ ಪತ್ತೆಹಚ್ಚಬಹುದು ಎನ್ನುವುದು ತಜ್ಞರ ಅಭಿಪ್ರಾಯ.

ಮೆದುಳಿನ ಕ್ರಿಯೆಯನ್ನು ವಿಶ್ಲೇಷಿಸುವ ಮೂಲಕ autism ಸ್ವರೂಪವನ್ನು ಗುರುತಿಸಬಹುದು ಎಂದು ಹೇಳಿರುವ ಟೊರೊಂಟೊದ ನರರೋಗ ತಜ್ಞರು, ಹೊಸ ತಂತ್ರದ ಮೂಲಕ ಪ್ರತಿಶತ 94ರಷ್ಟು ಪ್ರಮಾಣದಲ್ಲಿ ನಿಖರ ಫಲಿತಾಂಶ ಪಡೆಯಬಹುದು ಎಂದೂ ತಿಳಿಸಿದ್ದಾರೆ.

# ಒತ್ತಡವೂ ಒಳ್ಳೆಯದೇ!

ಮಾನಸಿಕ ಒತ್ತಡದಿಂದ ಒಳ್ಳೆಯದೂ ಆಗುತ್ತದೆ ಎಂಬ ಹೊಸ ಸಂಗತಿಯನ್ನು ಇತ್ತೀಚಿನ ಅಧ್ಯಯನವೊಂದು ಪತ್ತೆ ಹಚ್ಚಿದೆ.

ಈ ವರೆಗೆ ಒತ್ತಡದಿಂದ ಆರೋಗ್ಯದ ಮೇಲೆ ಉಂಟಾಗುವ ಅಡ್ಡ ಪರಿಣಾಮವನ್ನೇ ಗುರುತಿಸಲಾಗುತ್ತಿತ್ತು. ಆದರೆ, ಅದರಿಂದ ಮೆದುಳಿನ ಕಾರ್ಯಕ್ಷಮತೆ ಹೆಚ್ಚುತ್ತದೆ ಎನ್ನುವುದು ವಾಷಿಂಗ್ಟನ್ ಸಂಶೋಧಕರ ವಾದ.

ಕೆಲವೊಮ್ಮೆ ಉಂಟಾಗುವ ಒತ್ತಡದಿಂದ ಮನಸ್ಸು ಹೆಚ್ಚು ಜಾಗೃತವಾಗುತ್ತದೆ. ನಡವಳಿಕೆಯಲ್ಲಿಯೂ ವ್ಯತ್ಯಾಸ ಉಂಟಾಗುತ್ತದೆ. ಇದರಿಂದ ಮೆದುಳಿನ ಅರಿವಿನ ಸಾಮರ್ಥ್ಯಕೂಡ ಹೆಚ್ಚುತ್ತದೆ. ಆದ್ದರಿಂದ ಮಾನಸಿಕ ಒತ್ತಡವೂ ಮಾನಸಿಕ ವಿಕಾಸಕ್ಕೆ ಬುನಾದಿಯಾಗುತ್ತದೆ ಎಂಬ ಸಂಗತಿಯನ್ನು ಸಂಶೋಧಕರು ಪ್ರತಿಪಾದಿಸಿದ್ದಾರೆ.

ಇಲಿಗಳ ಮೇಲೆ ಅಧ್ಯಯನ ನಡೆಸಿದ ವಿಜ್ಞಾನಿಗಳು, ಒತ್ತಡಕ್ಕೆ ಮೆದುಳು ಹೊಸ ಜೀವಕೋಶವನ್ನು ಸೃಷ್ಟಿಸುತ್ತದೆ. ಒಂದೆರಡು ವಾರದಲ್ಲಿ ಮೆದುಳಿನ ಜೀವಕೋಶ ಬೆಳವಣಿಗೆ ಹೊಂದಿ ಸಮರ್ಥವಾಗಿ ಕಾರ್ಯನಿರ್ವಹಿಸುವುದನ್ನು ಗುರುತಿಸಲಾಗಿದೆ ಎಂದು ಹೇಳಿದ್ದಾರೆ. ಮೆದುಳಿನ ಜೀವಕೋಶ ವಿಭಜನೆ ಹಾಗೂ ಅಭಿವೃದ್ಧಿಗೆ ಒತ್ತಡ ನೆರವಾಗುವುದರಿಂದ ಅದು ಅರಿವನ್ನು ವಿಸ್ತಾರಗೊಳಿಸುತ್ತದೆ ಎನ್ನುವುದು ವಿಜ್ಞಾನಿಗಳ ವಾದ.

# ಅಕಾಲಿಕ ಜನನ ತಡೆಗೆ ಮೀನು!

ಧಾರಾಳವಾಗಿ ಮೀನನ್ನು ಸೇವಿಸುವುದರಿಂದ ಅಕಾಲಿಕ ಜನನ ನಿಯಂತ್ರಣ ಸಾಧಿಸಬಹುದು ಎಂದು ಆಸ್ಟ್ರೇಲಿಯಾದ ಸಂಶೋಧಕರು ಹೇಳಿದ್ದಾರೆ.

ಅಕಾಲಿಕ ಜನನ ಅಥವಾ ಗರ್ಭಪಾತ ತಡೆಗೆ ‘ಒಮೆಗಾ 3 ಫ್ಯಾಟಿ ಆ್ಯಸಿಡ್’ ಪೂರಕವಾಗಿ ಕೆಲಸ ಮಾಡುತ್ತದೆ. ಆದ್ದರಿಂದ ಗರ್ಭಿಣಿಯರು ನಿತ್ಯದ ಆಹಾರದ ಜೊತೆ ಹೆಚ್ಚುವರಿಯಾಗಿ ಮೀನನ್ನು ಆಹಾರದ ಭಾಗವನ್ನಾಗಿ ಮಾಡಿಕೊಂಡರೆ ಸಮಸ್ಯೆಯನ್ನು ದೂರ ಮಾಡಬಹುದು ಎಂದು ತಜ್ಞರು ಹೇಳಿದ್ದಾರೆ.

ಅಧ್ಯಯನಕ್ಕೆ 2400 ಮಹಿಳೆಯರನ್ನು ಒಳಪಡಿಸಿದ್ದರು. ಗರ್ಭಿಣಿಯರು ‘ಒಮೆಗಾ 3 ಫ್ಯಾಟಿ ಆ್ಯಸಿಡ್’ಯುಕ್ತ ಆಹಾರವನ್ನು ಸೇವಿಸಿದರೆ, ಗರ್ಭದಲ್ಲಿರುವ ಶಿಶುವಿನ ಬೆಳವಣಿಗೆ ಸಮರ್ಪಕವಾಗಿರುತ್ತದೆ. ಇದಲ್ಲದೆ ಅಕಾಲಿಕ ಜನನಕ್ಕೂ ತಡೆಯೊಡ್ಡಬಹುದು ಎಂದು ಅಭಿಪ್ರಾಯಪಟ್ಟಿದ್ದಾರೆ.

# ಕೆಫಿನ್ ಕ್ಯಾನ್ಸರ್ ಜೀವಕೋಶ ಹಂತಕ!

ಕೆಫಿನ್‌ಗೆ ಕ್ಯಾನ್ಸರ್ ಕಾರಣವಾಗುವ ಜೀವಕೋಶವನ್ನು ಬಗ್ಗುಬಡಿಯುವ ಗುಣವಿದೆ. ಮುಂದೊಂದು ದಿನ ಇದನ್ನು ಕ್ಯಾನ್ಸರ್ ಚಿಕಿತ್ಸೆಗೆ ಬಳಸಬಹುದು ಎಂದು ಸಂಶೋಧಕರು ಅಭಿಪ್ರಾಯಪಟ್ಟಿದ್ದಾರೆ.

ಆದರೆ ಇದನ್ನು ಚಿಕಿತ್ಸೆಗೆ ಯಾವ ರೀತಿಯಲ್ಲಿ ಬಳಸಬೇಕು ಎನ್ನುವ ಮಾರ್ಗವನ್ನು ನಾವು ಕಂಡುಕೊಳ್ಳಬೇಕು ಎಂದಿರುವ ಸಂಶೋಧಕರು, ಕಾಫಿಯಲ್ಲಿರುವ ಕೆಫಿನ್ ಕ್ಯಾನ್ಸರ್ ಜೀವಕೋಶಗಳ ಹಂತಕ ಎಂದು ಹೇಳಿದ್ದಾರೆ.

–ಟಿಪ್ಸ್




ಶ್ರೀ ಪಂಚಮುಖಿ ಜ್ಯೋತಿಷ್ಯಂ

INDIA'S MOST POPULAR ASTROLOGER

ಪಂಡಿತ. ಶ್ರೀ ಗಣೇಶ್ ಕುಮಾರ್ ಶ್ರೀ ಶ್ರೀ ಹನುಮಾನ್ ಆರಾಧಕರು

ಕೇರಳ, ಕಲ್ಕತ್ತಾದ ಸಾವಿರಾರು ವರ್ಷಗಳ ಹಿಂದಿನ ಪ್ರಾಚೀನ ನಾಡಿಗ್ರಂಥ ಆಧಾರದಿಂದ ಸರ್ವಮಂತ್ರ ವಿದ್ಯೆ, ಜ್ಯೋತಿಷ್ಯ ಶಾಸ್ತ್ರ



ಪಂಚಮಹಾಗುರುಗಳ ಬೋಧನೆಯಿಂದ ಯೋಗ ಯಜ್ಞಗಳ ಮೂಲಕ ಸರ್ವ ವಿದ್ಯೆಯನ್ನು ತಮ್ಮ ವಶದಲ್ಲಿರಿಸಿಕೊಂಡಿರುವವರು. ವಶೀಕರಣ, ಮದುವೆ, ಸಂತಾನ, ದಾಂಪತ್ಯ, ಪ್ರೇಮವಿಚಾರ, ಲೈಂಗಿಕ, ಮಾನಸಿಕ, ಗೃಹಶಾಂತಿ, ವಿದ್ಯೆ, ಆರೋಗ್ಯ, ವಿದೇಶ ಪ್ರಯಾಣ, ಹಣಕಾಸು, ವ್ಯಾಪಾರ,ಉದ್ಯೋಗ, ಕೋರ್ಟ್ ಕೇಸು, ಸಾಲಬಾಧೆ, ಮಾಟಬಾಧೆ, ಶತ್ರುಕಾಟ, ಅಲ್ಲದೆ ರಾಜಯೋಗ ವಶ ಮತ್ತು ಅಖಂಡ ಯೋಗವಶಗಳು, ಇನ್ನಿತರ ನಿಮ್ಮ ಯಾವುದೇ ಕಠಿಣ, ನಿಗೂಢ ಮತ್ತು ಗುಪ್ತ ಸಮಸ್ಯೆಗಳಿಗೆ, ಸಲಹೆ ಮತ್ತು ಪರಿಹಾರ ಶತಸಿದ್ಧ.

600 ವರ್ಷ ಹಳೆಯ ಪಂಚಸಿದ್ಧಿ ತಂತ್ರಗಳಿಂದ ನಿಮ್ಮ ದುಶ್ಚಟ, ದೀರ್ಘಾವಧಿ, ಲೈಂಗಿಕ, ಸಂತಾನ, ಸಮಸ್ಯೆಗಳಿಗೆ ಸನಾತನ ಪ್ರಕ್ರಿಯೆಗಳಿಂದ ಅತೀ ಶೀಘ್ರದಲ್ಲಿ ಸಮಗ್ರ ಪರಿಹಾರ ಕಲ್ಪಿಸುತ್ತಿರುವವರು.

ವಿ.ಸೂ.: ಇಲ್ಲಿ ಹೇಳುವ ವಿಷಯಗಳೆಲ್ಲವೂ ಗುಪ್ತವಾಗಿರುವುದರಿಂದ ನಿಮ್ಮ ಯಾವುದೇ ಸಮಸ್ಯೆಗಳನ್ನು ಹೇಳಲು ಹಿಂಜರಿಯಬೇಕಾಗಿಲ್ಲ. ದೂರವಾಣಿ ಹಾಗೂ ಪತ್ರದ ಮೂಲಕ ವಿವರಗಳನ್ನು ಪಡೆಯಬಹುದು.

ಬೆಂಗಳೂರು ಖಾಯಂ ಮನೆ ವಿಳಾಸ ನಂ.167/3, ಮೊದಲನೇ ಮಹಡಿ, 1ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ಮುತ್ತುರಾಯಸ್ವಾಮಿ ದೇವಸ್ಥಾನದ ಹತ್ತಿರ, ಮೈಸೂರು ಸರ್ಕಲ್, (ಸಿರಸಿ ವೃತ್ತ), ಚಾಮರಾಜಪೇಟೆ, ಬೆಂಗಳೂರು–18.

ಸಮಸ್ಯೆ ಏನೇ ಇರಲಿ, ಎಷ್ಟೇ ಕಠಿಣವಾಗಿರಲಿ 600 ವರ್ಷಗಳ ಹಳೆಯ 108 ಜ್ಯೋತಿಷ್ಯ ತಂತ್ರಗಳಿಂದ ಮಹೋನ್ನತ ಪರಿಹಾರಗಳು.

ಮೈಸೂರು ಖಾಯಂ ಮನೆ ವಿಳಾಸ ನಂ.8949, ವಿಜಯನಗರ 4ನೇ ಸ್ಟೇಜ್, ಎಸ್.ಆರ್.ಎಸ್. ಗೇಟ್ ಹತ್ತಿರ, ಯಶಸ್ವಿನಿ ಕಲ್ಯಾಣಮಂಟಪದ ಹತ್ತಿರ, ಹುಣಸೂರು ರಸ್ತೆ, ಹೂಟಗಳ್ಳಿ, ಮೈಸೂರು–18.

ಬೆಂಗಳೂರು ಮೈಸೂರು 9880444450